ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ಸಂ.ವಾತೆಅಆ/ಜಾರಿ/ದವ/ವಾವಿ/ಸಿಆರ್-05/2022-23

ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರವರ ಕಛೇರಿ,
(ಜಾರಿ)-ದಕ್ಷಿಣ ವಲಯ, ವಾಣಿಜ್ಯ ತೆರಿಗೆ
ಕಾರ್ಯಾಲಯ-2, ಬಿ ಬ್ಲಾಕ್, ಕೋರಮಂಗಲ,
ಬೆಂಗಳೂರು-560047, ದಿನಾಂಕ 08-02-2023.

# ಟೆಂಡರ್‌ನ ನಿಬಂಧನೆಗಳು

ವಿಷಯ: ದಿನಾಂಕ: 01.04.2023 ರಿಂದ ದಿನಾಂಕ: 31.03.2024 ರ ಅವಧಿಗೆ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರ ಕಛೇರಿ(ಜಾರಿ), ದಕ್ಷಿಣ ವಲಯ, ಬೆಂಗಳೂರು, ಈ ಕಛೇರಿಗೆ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ: ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರವರ ಪತ್ರ ಸಂಖ್ಯೆ:ವಿಹೆಚ್‌ಟಿ/ ಸಿ.ಆರ್-15/2022-23 ದಿನಾಂಕ: 22.12.2022.

* * *

ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ)-ದಕ್ಷಿಣ ವಲಯ, ಬೆಂಗಳೂರು ಇವರ ಕಛೇರಿಯ ಉಪಯೋಗಕ್ಕಾಗಿ 45 (ನಲವತ್ತೈದು) ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ ಉಲ್ಲೇಖದ ಆದೇಶದಲ್ಲಿ ತಿಳಿಸಿರುವ ಮಾಲೀಕರೇ ಚಾಲಕರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಆಸಕ್ತ ಒಬ್ಬ ವಾಹನ ಮಾಲೀಕ/ಚಾಲಕರು ಒಂದು ವಾಹನ ಸೇವೆಗೆ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 30 ಶಿವಾನೀ 2019, ದಿನಾಂಕ:31.03.2022.ರಲ್ಲಿ ತಿಳಿಸಿರುವ ನಿಯಮಗಳನ್ವಯ ಖಾಸಗಿ ವಾಹನಗಳ ಸೇವೆಯನ್ನು ಪಡೆಯಲಾಗುವುದು.

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30 **ಶಿವಾನೀ** 2019, **ಬೆಂಗಳೂರು** ದಿ: 31.03.2022.ರ ಅನ್ವಯ ವಾಹನಗಳ ಬಾಡಿಗೆ ತಿಂಗಳಿಗೆ ಮೊತ್ತ ರೂ.35,000-00 ನೀಡಲಾಗುವುದು.
2. ವಾಹನದ ಮಾದರಿಯು **2018** ಮತ್ತು ನಂತರದಾಗಿರತಕ್ಕದ್ದು, ಪ್ರತಿ ವಾಹನದ ಗುಣಮಟ್ಟವನ್ನು ಹಾಗೂ ಚಾಲನ ಕೌಶಲ್ಯವನ್ನು ಪರಿಶೀಲಿಸಿ ನಂತರವೇ ವಾಹನಗಳನ್ನು ತೆಗೆದುಕೊಳ್ಳಲಾಗುದು.

3. ದಿನಾಂಕ:**31.03.2023** ರಿಂದ ಅನ್ವಯವಾಗುವಂತೆ ಈ ಹಿಂದೆ ಸತತವಾಗಿ 5 ವರ್ಷಗಳ ಕಾಲ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವ ಯಾವುದೇ ಮಾಲಿಕರೇ ಚಾಲಕರಾಗಿರುವ ಖಾಸಗಿ ವಾಹನಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
4. ಗುತ್ತಿಗೆಯ ಆವಧಿ ದಿನಾಂಕ **01–04–2023 ರಿಂದ 31–03–2024** ರವರೆಗೆ

ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ:27.02.2023 ಸಂಜೆ 5.00** ಘಂಟೆಯವರೆಗೆ, ಆ ನಂತರ ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.

ಅರ್ಹಗೊಂಡ ಮಾಲೀಕರೇ ಚಾಲಕರಾಗಿರುವ ವಾಹನ ಮಾಲೀಕ/ಚಾಲಕರ ವಿವರವನ್ನು ನಿಗಧಿತ ಅವಧಿಯಲ್ಲಿ ತಿಳಿಸಲಾಗುವುದು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು**

| | |
|---|---|
| 1 | ಅರ್ಜಿದಾರರ ಹೆಸರು,ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು–2 |
| 2 | ವಿಳಾಸದ ದಾಖಲೆ (ಮತದಾರರ ಗುರುತಿನ ಚೀಟಿ/ರೇಷನ್ ಕಾರ್ಡ್/ಆಧಾರ್ ಕಾರ್ಡ್/ಪಾಸ್ ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ ಹಾಗೂ ಖಾಯಂ ವಿಳಾಸದ ದಾಖಲೆ, ಬ್ಯಾಂಕ್ ಖಾತೆಯ ವಿವರಗಳು/ಚೆಕ್ಕಿನ ಪ್ರತಿ. |
| 3 | ವಾಹನದ ನೊಂದಣಿ ಪುಸ್ತಕದ ಪ್ರತಿ – ಪ್ರಮಾಣ ಪತ್ರ |
| 4 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನದ ವಿಮಾ ಪಾಲಿಸಿಯ ಪ್ರತಿ |
| 5 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ |
| 6 | ರಸ್ತೆ ತೆರಿಗೆ ಪಾವತಿಸಿರುವ ವಿವರ |
| 7 | ಮಾಲೀಕರಿಗೆ ಸಂಬಂಧಿಸಿದಂತೆ ಡ್ರೈವಿಂಗ್ ಲೈಸನ್ಸ್<br>ಚಾಲಕರ ದೈಹಿಕ ಸಾಮರ್ಥ ಪ್ರಮಾಣ ಪತ್ರ |
| 8 | ಪಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ನಮೂದಿಸತಕ್ಕದ್ದು. |
| 9 | ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು, ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ ಖಾಸಗಿ ವಾಹನ ಚಾಲಕರ/ಮಾಲೀಕರ ಹೊರಗುತ್ತಿಗೆ ಸೇವೆ ಸಲ್ಲಿಸಲು ಅರ್ಜಿ ಎಂದು ನಮೂದಿಸುವುದು |
| 10 | ಅಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು |
| 11 | ಅರ್ಜಿಗಳನ್ನು ಖುದ್ದಾಗಿ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರವರ ಕಛೇರಿ(ಜಾರಿ)–ದಕ್ಷಿಣ ವಲಯ, ಕೊಠಡಿ ಸಂಖ್ಯೆ–308, ಮೂರನೇ ಮಹಡಿ, ಬಿ ಬ್ಲಾಕ್, ವಾಣಿಜ್ಯ ತೆರಿಗೆ ಕಾರ್ಯಾಲಯ–2, ಕೋರಮಂಗಲ, ಬೆಂಗಳೂರು ಇವರ ಶಾಖೆಯಲ್ಲಿ ಸಲ್ಲಿಸುವುದು ಹಾಗೂ ಅರ್ಜಿಗಳ ಸ್ವೀಕೃತಿ ಅನುಸಾರವಾಗಿ ಕ್ರಮ ಸಂಖ್ಯೆ ನೀಡಲಾಗುವುದು. |
| 12 | ಅರ್ಜಿಗಳನ್ನು ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯುವುದು ಹಾಗೂ ಕಾರ್ಯ ನಿರ್ವಹಣೆಯಲ್ಲಿ ಪಾಲಿಸಬೇಕಾದ ನಿಯಮಗಳು/ಷರತ್ತುಗಳ ವಿವರಗಳ ಪಟ್ಟಿ ಅನ್ವಯ ಖಡ್ಡಾಯವಾಗಿ ನಿಯಮಗಳನ್ನು ಅರ್ಹಗೊಳ್ಳುವ ವಾಹನ ಮಾಲೀಕ/ಚಾಲಕರು ಖಡ್ಡಾಯವಾಗಿ ಪಾಲಿಸತಕ್ಕದ್ದು |
| 13 | ಅರ್ಹಗೊಂಡ ಅರ್ಜಿದಾರರ ವಿವರಗಳ ಪಟ್ಟಿಯ ಪ್ರಕಟಣೆಯನ್ನು ನಿಗಧಿತ ಅವಧಿಯಲ್ಲಿ ತಿಳಿಸಲಾಗುವುದು. |